2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ. ಸಿ. ನಂ.139/18**

ಆರೋಪಿಯ ಹೆಸರು    ರಘು ಜಿ ಬಿನ್ ಗನಸೋಮಚಾರಿ, 29 ವರ್ಷ,

ವಾಸ್ತವ್ಯ    ಚಿಕ್ಕಯ್ಯನಛತ್ರ, ತಾಂಡವಪುರ,
ನಂಜನಗೂಡು ತಾಲ್ಲೂಕು.

ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ 1: ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ :

ಪ್ರಶ್ನೆ 2: ಫ್ರಾಸಾ-1 ಬಿ.ಎಂ.ಮಾಲೇಗೌಡ, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಫ್ರಾಸಾ-1 ರವರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಹಣದ ಅವಶ್ಯಕತೆಯಿದೆ ಎಂದು ಫಿರ್ಯಾದುದಾರರನ್ನು 2016 ನೇ ಇಸವಿ ಜೂನ್ ತಿಂಗಳಿನಲ್ಲಿ ಭೇಟಿ ಮಾಡಿ ರೂ.2,00,000/- ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು 04 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ 3 ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಐ.ಸಿಐ.ಸಿ.ಐ ಬ್ಯಾಂಕ್, ರಾಮಾವಿಲಾಸ ರಸ್ತೆ, ಮೈಸೂರು ಶಾಖೆಯ ಚಕ್ ನಂ:001602 ನ್ನು ರೂ.2,00,000/–ಗಳಿಗೆ ದಿ:19.10.2016 ಎಂದು ನಮೂದಿಸಿ ಫ್ರಾಸಾ-1 ರವರಿಗೆ ನೀಡಿದ್ದು, ಸದರಿ ಚಕ್ಕನ್ನು ಫ್ರಾಸಾ-1 ರವರು ನಗದೀಕರಣ ಪಡಿಸಲು ತಮ್ಮ ಖಾತೆಯಿರುವ ವಿಜಯಾ ಬ್ಯಾಂಕ್, ನಂಜನಗೂಡು ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಅಕೌಂಟ್ ಕ್ಲೋಸ್ಡ್ ಎಂಬ ಹಿಂಬರಹದೊಂದಿಗೆ ದಿ:27.09.2016 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ 4 ಫ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ ದಿ:26.10.2016 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದು, ಹಣವನ್ನು ಮರುಪಾವತಿ ಮಾಡದೆ ಕಲಂ 138

ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ 5 ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ 6ಃ ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ20.03.2023 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು